ಪುಟ್ಟ ಘಟನೆಗಳ ಗಾಳಿಯಲ್ಲೂ ತಿದಿಯೊತ್ತಿದಂತೆ ಭಗ್ಗನೆ ಹೊತ್ತಿಕೊಂಡು ಬೆಂಕಿಯಾಗಿಬಿಡುತ್ತಿತ್ತು.

ಅದಕ್ಕೆಂದೇ ಗಡಿಯ ಇತ್ತಗಿನ ನೆಲವನ್ನು ಆಕ್ರಮಿಸಿಕೊಂಡಿದ್ದ ಅತ್ತಲಿನ ಸರ್ಕಾರ, ಸಾಮಾನ್ಯ ಜನರ ವಿಚಾರವನ್ನು ಹದ್ದುಬಸ್ತಿನಲ್ಲೇ ಇಟ್ಟುಕೊಂಡಿರಬೇಕೆಂದು ಸೈನಿಕರಿಗೆ ಹುಕುಂ ನೀಡಿತ್ತು. ಜನಸಾಮಾನ್ಯರ ವಿಚಾರಗಳು ಪ್ರಕ್ಷುಬ್ಧ ಸ್ಥಿತಿಯನ್ನು ತಲುಪದಂತೆ ವಿಚಾರಗಳನ್ನು ಸಾಧ್ಯವಾದಷ್ಟೂ ಮೊಟಕುಗೊಳಿಸಿಕೊಂಡು ಸಾಗುವಂತೆ ಹೇಳಿತ್ತು. ವಿಚಾರ ಕೈ ಮೀರಿದರೆ ಮತ್ತೊಂದು ಯುದ್ಧವಾಗುವ ಸಂಭವವಿತ್ತು. ಇನ್ನು ಅಂತರರಾಷ್ಟ್ರೀಯ ಮಾನವೀಯ ಸಂಘಗಳೂ ಕೈ ಮಿಲಾಯಿಸಿ ಬೊಬ್ಬೆ ಹೊಡೆಯಬಹುದಿತ್ತು. ಅದಕ್ಕೆಂದೇ ಈ ಜನರು ಸೈನಿಕರಿಗೆ ಬಿಸಿ ತುಪ್ಪವಾಗಿದ್ದರು. ಆದರೆ, ಜನರನ್ನು ಆಗಾಗ ಹೆದರಿಸಿ ಬೆದರಿಸಿ ಅಂಕೆಯಲ್ಲಿಟ್ಟುಕೊಳ್ಳದೆ ವಿಧಿಯಿರಲಿಲ್ಲ.

ಆ ಆಕ್ರಮಿತ ಗಡಿನಾಡಿನವರ ಮೇಲೆ ಈ ಪರದೇಶೀ ಸೈನಿಕರಿಗೆ ಯಾವ ಕರುಣೆಯೂ ಇರಲಿಲ್ಲ. ಅಷ್ಟಕ್ಕೂ ಅವರು ಈ ಜನರನ್ನು ಕಾಯುವ ಕರ್ಮವನ್ನು ಹಳಿದುಕೊಳ್ಳುತ್ತಿದ್ದರು.

ಅದಕ್ಕೆ ಸರಿಯಾಗಿ ಯಾವತ್ತೂ ಜನರು ಈ ಸೈನಿಕರನ್ನು ಗುಮಾನಿಯಿಂದಲೇ ಕಂಡಿದ್ದರು. ಶತ್ರುಗಳಂತೆಯೇ ನೋಡುತ್ತಿದ್ದರು. ಅವರೊಡನೆ ಒಂಟಿ ನಿಮಿಷ ಸಿಕ್ಕಾಗಲೆಲ್ಲ ಸೈನಿಕರಿಗೆ ಕಿರಿ ಕಿರಿ ಮಾಡುವುದೇ ಅವರಿಗಿದ್ದ ದೊಡ್ಡ ಮನರಂಜನೆಯಾಗಿಬಿಡುತ್ತಿತ್ತು. ತಮ್ಮ ಬಗಲಲ್ಲೇ ಶತ್ರುಗಳನ್ನಿಟ್ಟುಕೊಂಡು ಕಳೆಯುತ್ತಿದ್ದ ಅವರ ಬದುಕು ಸ್ಫೋಟಗೊಳ್ಳಲಿದ್ದ ಟೈಂ ಬಾಂಬೊಂದರ ಮಿಡಿತವನ್ನು ಹೊಂದಿತ್ತು. ಒಬ್ಬನೇ ಸೈನಿಕ ಒಂಟಿಯಾಗಿ ಒಂದು ಗುಂಪು ಜನರಿಗೆ ಸಿಕ್ಕರೆ, ಅವನನ್ನು ಕೊಲ್ಲಲೂ ಹೇಸುತ್ತಿರಲಿಲ್ಲ. ಪುಂಡ ಮಕ್ಕಳು ಸೈನಿಕರ ಕಣ್ಣು ತಪ್ಪಿಸಿ ಅವರಿಗೆ ಕಲ್ಲು ಹೊಡೆಯುತ್ತಿದ್ದರು. ಕೆಲವು ಸೈನಿಕರಿಗೆ ಮಾರಣಾಂತಿಕವಾದ ಪೆಟ್ಟು ಬಿದ್ದಿದ್ದವು. ಬಲವಂತವಾಗಿ ಈ ಸೈನಿಕರ ಹದ್ದುಬಸ್ತಿನಲ್ಲಿರುವುದು ಜನರಿಗೆ ಇಷ್ಟವಿರಲಿಲ್ಲ. ಹಾಗೆಂದು ತಲತಲಾಂತರದಿಂದ ಬಂದಿದ್ದ ಆಸ್ತಿಪಾಸ್ತಿಗಳನ್ನು ಬಿಟ್ಟು ಓಡಿಹೋಗಲು ಅವರಿಗೆ ಸಾಧ್ಯವಿರಲಿಲ್ಲ. ಹಾಗೆ ಹೋಗಲು, ಅವರ ಸ್ಥಿರಾಸ್ಥಿಗಳನ್ನು ಯಾರೂ ಕೊಳ್ಳುತ್ತಿರಲಿಲ್ಲ.

ಆ ಹಳ್ಳಿಯ ಸುತ್ತಲಿನ ದುರ್ಗಮ ಹಾದಿ, ಹಳ್ಳ, ಕೊರಕಲು, ಕಣಿವೆ, ತೊರೆ, ಹಳ್ಳ ಮತ್ತು ಕಾಡಿನ ನಡುವೆ ಗಡಿರೇಖೆಯೊಂದನ್ನು ಸರ್ಕಾರಗಳು ಎಳೆಯುವ ಮೊದಲೇ ಈ ಜನರ ವಂಶಜರು ಬಂದು ಈ ಹಳ್ಳಿಗಳಲ್ಲಿ ಬೀಡುಬಿಟ್ಟಿದ್ದರು. ಯುದ್ಧಗಳ ನಂತರ ಹೊಸ ಗಡಿರೇಖೆಗಳು ಎಳೆಯಲಾದ ಮೇಲೂ ಅಲ್ಲೇ ಉಳಿದಿದ್ದರು. ಹಾಗಾಗಿ ಅವರಿಗೆ ಅರಿವೇ ಇಲ್ಲದಂತೆ ಅವರು ಮತ್ತೊಂದು ದೇಶದ ಪಾಲಾಗಿದ್ದರು. ಆದರೆ, ಪಕ್ಕದ ದೇಶದವರು ಆಕ್ರಮಣ ನಡೆಸಿ, ಬಲವಂತವಾಗಿ ಅವರ ಆಡಳಿತವನ್ನು ಈ ಜನರ ಮೇಲೆ ಹೇರಿದ್ದು ಅವರಿಗೆ ಸುತರಾಂ ಇಷ್ಟವಿರಲಿಲ್ಲ. ಹೊಸ ಗಡಿರೇಖೆಗಳು ಎಳೆಯಲಾದ ನಂತರ ತಮ್ಮದೇ ದೇಶದ ಗಡಿಯೊಳಗೆ ಈ ಜನರು ಪ್ರವೇಶಿಸುವಂತಿರಲಿಲ್ಲ, ಇತ್ತ ಆಕ್ರಮಿತ ದೇಶದ ಗಡಿಯೊಳಗೂ ಇವರಿಗೆ ಸ್ವಂತಿಕೆಯಿರಲಿಲ್ಲ. ಎರಡೂ ಕಡೆಯವರು ಈ ಜನರನ್ನು ಶಂಕೆಯಿಂದ ನೋಡುತ್ತಿದ್ದರು. ಇದ್ದಲ್ಲಿ ತ್ರಿಶಂಕುಗಳಂತೆ ಬಂಧಿಯಾಗಿದ್ದ ಇವರ ಬದುಕು ಮುಚ್ಚಿದ ಬಟ್ಟಲೊಳಗೆ ಕುದಿಯುತ್ತಿದ್ದ ನೀರಿನಂತೆ ಚಂಚಲವಾಗಿತ್ತು. ತಮ್ಮ ಮೇಲೆ ಹೇರಿದ್ದ ನಿರ್ಬಂಧಗಳನ್ನು ಹಾರಿಸಿ ಚೆಲ್ಲಿ ಸಿಡಿಸಲು ತಯಾರಾದ ಸ್ಥಿತಿಯಲ್ಲಿ ಕುದಿಯುತ್ತಿತ್ತು. ಶಾಂತಿಯೆನ್ನುವ ಪದ ಆವಿಯಾಗಿಹೋಗಿತ್ತು.

ಇಂತಹವರು ಗಡಿ ಸೈನಿಕರ ಕಣ್ಣು ತಪ್ಪಿಸಿ ಆಗೀಗ ಭೇಟಿಯಾಗುತ್ತಿದ್ದರು. ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ವ್ಯಾಪಾರವೂ ನಡೆಯುತ್ತಿತ್ತು. ಅಂತಹ ಕೆಲವರಿಗೆ ಅವರ ಮೇಲೆ ನಿಯಂತ್ರಣ ಹೇರುವ ಸೈನಿಕರು ಶತ್ರುಗಳಂತೆ ತೋರುತ್ತಿದ್ದರು.

ಕಣ್ಣು ತಪ್ಪಿಸಿ ಸೈನಿಕರಿಗೆ ಕಲ್ಲು ಹೊಡೆದವನು ಅವತ್ತಿನ ಮಟ್ಟಿಗೆ ಹೀರೋ ಎನಿಸಿಕೊಳ್ಳುತ್ತಿದ್ದ. ಈ ಅಧಿಕಪ್ರಸಂಗಿ ಮಕ್ಕಳಿಗೆ ಬುದ್ಧಿ ಕಲಿಸಲು ಸೈನಿಕರು ಮಕ್ಕಳನ್ನು ಒಂದೆರಡು ವಾರ ಜೈಲಿಗೆ ಹಾಕಿದರಂತೂ ಆ ಹುಡುಗರು ಗಂಡುಗಳಾಗಿ ಹೊರಬರುತ್ತಿದ್ದರು. ಅವರಿಗೆ ಸಮಾಜದಲ್ಲಿ ವೀರೋಚಿತ ಸ್ವಾಗತ ಸಿಗುತ್ತಿತ್ತು. ಅಂಡಿನ ಮೇಲಿನ ಬಾಸುಂಡೆಗಳು ಮಾಯುವ ಮುನ್ನವೇ ಅವರು ಜೈಲಿನ ತಮ್ಮ ರೋಚಕ ಕಥೆಗಳನ್ನು ಹೇಳಲು ಶುರುಮಾಡುತ್ತಿದ್ದರು.

ಗಡಿ ಸೈನಿಕರ ಪಹರೆಯಲ್ಲಿ ಆ ಊರಿನ ಎಲ್ಲರೂ ಶಂಕಿತರೇ. ಶಾಲೆಯೊಂದು ಇತ್ತಾದರು, ಯುದ್ಧ ಅಥವಾ ಸೈನಿಕರ ನಡುವೆ ತಿಕ್ಕಾಟ ನಡೆದಾಗೆಲ್ಲ ಅದು ಮುಚ್ಚಲಾಗುತ್ತಿತ್ತು

ಊಟದ ಜೊತೆಗೆ ದ್ವೇಷವನ್ನೂ, ಬದುಕುಳಿಯಲು ಬೇಕಿದ್ದ ತಂತ್ರಗಳನ್ನು ಬೆರೆಸಿ ತಿನಿಸದಿದ್ದರೆ ಮಕ್ಕಳು ಆ ಆತಂಕದ ವಾತಾವರಣದಲ್ಲಿ ಬದುಕುಳಿಯಲಾಗುತ್ತಿರಲಿಲ್ಲ. ಶಬ್ಬೀರ ಹಾಲುಗಲ್ಲದ ಬಾಲಕನಾಗಿದ್ದಾಗಿನಿಂದ ಈ ಹಾಲಾಹಲದಲ್ಲಿ ಅದ್ದಿ ತೆಗೆದ ಪುತ್ಥಳಿಯಂತೆಯೇ ಬೆಳೆದಿದ್ದ.

## 3

ಶಬ್ಬೀರನ ತಂದೆ ಅಬ್ಬಾಸ್ ರಸ್ತೆ ಬದಿ ಬಟ್ಟೆ ವ್ಯಾಪಾರ ಮಾಡುತ್ತಿದ್ದ. ಶಬ್ಬೀರನೂ ಅಬ್ಬಾನ ಜೊತೆ ವ್ಯಾಪಾರಕ್ಕೆ ನಿಲ್ಲುತ್ತಿದ್ದ. ಅಬ್ಬಾಸ್ ಕೂತ ಕಡೆ ಕೂತರೆ, ಶಬ್ಬೀರ್ ಭುಜ ಕೈಗಳ ಮೇಲೆ ಬಟ್ಟೆಗಳನ್ನೆಸೆದುಕೊಂಡು ರಸ್ತೆಯ ಉದ್ದಕ್ಕೂ ಕೂಗಿ ಮಾರಾಟಮಾಡುತ್ತಿದ್ದ.

ಬಿಡುವಿದ್ದ ಒಂದು ದಿನ, ಶಬ್ಬೀರ ಮತ್ತವನ ತುಕಡಿ, ಅವರ ಮಹಡಿಗೇ ಹೊಂದಿಕೊಂಡಿದ್ದ ಸೈನಿಕರ ಕಟ್ಟಡದ ತಾರಸಿಯ ಮೇಲೆ ಕಚ್ಚಾ ಬಾಟಲಿ ಬಾಂಬೊಂದನ್ನು ಎಸೆದು ಮಾಯವಾಗಿದ್ದರು. ಆದರೆ, ಅದು ಸ್ಫೋಟಿಸಿರಲಿಲ್ಲ. ಅದನ್ನು ಎಸೆದವರು ಯಾರೆಂದು ಯಾರೂ ನೋಡಿರಲಿಲ್ಲ. ಆದರೆ, ಅವರಿಗೆ ಶಬ್ಬೀರನ ಮನೆಯವರ ಮೇಲೆ ಗುಮಾನಿಯಿದ್ದೇ ಇತ್ತು.

ಶಬ್ಬೀರ ಎಂದಿನಂತೆ ಅಂದುಕೊಂಡು ಎದ್ದ ಒಂದು ಬೆಳಗು, ಸೈನಿಕರು ಅವರ ಅಂಗಡಿಯನ್ನು ಮುಚ್ಚಿಸಿದ್ದರು. ಅವನ ತಂದೆ–ತಾಯಿ ಮನೆಬಿಟ್ಟು ಎಲ್ಲೂ ಹೋಗದಂತೆ ಗೃಹಬಂಧನ ಹೇರಿದರು. ಅಬ್ಬಾಸ್ ಒಳಗೊಳಗೆ ಆಕ್ರಮಿತ ಸೈನಿಕರ ಚಲನವಲನಗಳನ್ನು ವಿರೋಧಿಸಿ ಗಡಿಯಾಚೆಗಿನ ತುಕಡಿಯವರಿಗೆ ಮಾಹಿತಿ ನೀಡುತ್ತಿದ್ದಾನೆಂದು ಆಪಾದಿಸಿದ್ದರು. ಅಲ್ಲಿನ ಜನರು ಸೈನಿಕರ ಮೇಲೆ ದಂಗೆಯೇಳುವಂತಹ ಮಾತುಗಳನ್ನಾಡಿದನೆಂದು ಅವನನ್ನು ಗೃಹಬಂಧನದಲ್ಲಿಟ್ಟಿದ್ದರು.

ಶಬ್ಬೀರನೇ ನಲವತ್ತು ದಿನ ಅವನ ಮನೆಯ ಕಾವಲಾಗಿದ್ದ. ಅವನಪ್ಪ ಅಬ್ಬಾಸ್ ಬರೆದುಕೊಟ್ಟ ಎಲ್ಲ ಕಾಗದ ಪತ್ರಗಳನ್ನು ದೂರದೂರಿನ ಲಾಯರಿಯೊಬ್ಬನ ಮನೆಗೆ ವಿನಿಮಯಿಸಿದ್ದ. ಸೈನಿಕರ ಬಳಿ ಯಾವ ನಿಖರ ಮಾಹಿತಿಯೂ ಇಲ್ಲವೆಂದು ಕೋರ್ಟಿನಲ್ಲಿ ಕೇಸು ಖುಲಾಸೆಯಾಗಿತ್ತು. ಅಬ್ಬಾಸ್ ಮತ್ತೆ ಅಂಗಡಿಯ ಬಾಗಿಲು ತೆಗೆದಿದ್ದರು. ಆದರೆ, ವ್ಯಾಪಾರ ಕುಸಿದುಹೋಗಿತ್ತು. ಅವರ ಊಟ ಬಟ್ಟೆಗೂ ಕಡಿತವಾಗಿತ್ತು.

ಅವತ್ತೊಂದು ದಿನ ಸೈನಿಕ ತುಕಡಿ ರಸ್ತೆಯಲ್ಲಿ ಎಂದಿನಂತೆ ಗಸ್ತು ತಿರುಗುತ್ತಿತ್ತು. ತನ್ನ ಬಾಟಲಿ ಬಾಂಬು ಠುಸ್ಸೆಂದ ಕಾರಣ ಕುದಿಯುತ್ತಿದ್ದ ಶಬ್ಬೀರ, ರಸ್ತೆಯ ತಿರುವಿನ ತನ್ನ ಸ್ನೇಹಿತನ ಮನೆಯ ತಾರಸಿಯ ಮೇಲಿಂದ ಅವರಿಗೆ ಕಲ್ಲು ತೂರಿದ್ದ. ರೊಚ್ಚಿಗೆದ್ದ ಸೈನಿಕರು ಅವನನ್ನು ಅಟ್ಟಾಡಿಸಿಕೊಂಡು ಹಿಡಿದು ಸೆರೆಮನೆಗೆ ತಳ್ಳಿದ್ದರು. ಬೂಟು ಕಾಲಲ್ಲಿ ಒದ್ದಿದ್ದರು. ಶಬ್ಬೀರ ಕಂ–ಕಿಂ ಎನ್ನದ ಅವರು ಹೇಳಿದ್ದಕ್ಕೆಲ್ಲ ತಲೆಯಾಡಿಸಿದ್ದ. ಶಬ್ಬೀರನ ಅಮ್ಮಿ ಸೈನಿಕರ ಬಾಗಿಲ ಬಳಿ ನಿಂತು ಹಗಲೂ ರಾತ್ರಿ ಮಗನನ್ನು ಬಿಡುವಂತೆ ರೋದಿಸಿ ಶಪಿಸಿದ್ದಳು.

ಕೇವಲ ಹನ್ನೆರಡು ವರ್ಷದವನಾದ ಕಾರಣ ಎರಡು ವಾರ ಜೈಲಿನಲ್ಲಿಟ್ಟುಕೊಂಡು ನಂತರ ಬಿಡುಗಡೆ ಮಾಡಿದ್ದರು. ಶಬ್ಬೀರ ಈಗ ಸಮಾಜದ ಸ್ಥಾನಮಾನದಲ್ಲಿ ಬೆಳೆದುಬಿಟ್ಟಿದ್ದ. ಸ್ವತಃ ಅವನ ಅಮ್ಮಿಯೇ ಅವನನ್ನು ಹೀರೋ ಎಂದು ಕರೆದಿದ್ದಳು. ಮಗ ಈಗ ವಯಸ್ಕರನಾದನೆಂದು ತಬ್ಬಿ ಅತ್ತಿದ್ದಳು. ಶಬ್ಬೀರ ಮಕ್ಕಳ ಮಟ್ಟಿಗೆ ಶತ್ರುವನ್ನು ಬಡಿದು ಬಂದ ಸೂಪರ್‌ಮ್ಯಾನ್ ಲೆಕ್ಕದಲ್ಲಿ ಬೆಳೆದುಬಿಟ್ಟಿದ್ದ.

ಇದೆಲ್ಲ ಆಗಿ ಈಗ ಎರಡು ವರ್ಷಗಳಾಗಿ ಹೋಗಿದ್ದವು. ಅಬ್ಬಾಸರ ವ್ಯಾಪಾರವೂ ಮತ್ತೆ ಲಾಭಕ್ಕೆ ತಿರುಗಿತ್ತು. ಹದಿನಾಲ್ಕರ ಪೋರ ಶಬ್ಬೀರ ಹಲವು ಕೈ ಕಸುಬುಗಳನ್ನು ಕಲಿತಿದ್ದ. ವ್ಯಾಪಾರ ಅವನಲ್ಲಿ ರಕ್ತಗತವಾಗಿತ್ತು. ಅಪ್ಪನ ಬಟ್ಟೆ ಬಿಸಿನೆಸ್ ತನ್ನ ವೃತ್ತಿಯೆಂದು ಅವನಾಗಲೇ ಸ್ವೀಕರಿಸಿಬಿಟ್ಟಿದ್ದ.

ಅವನೀಗ ರೆಕ್ಕೆ ಬಲಿತ ಹುಂಜದಂತೆ ಎರಗಲು ಮತ್ತೊಂದು ಸವಾಲಿಗಾಗಿ ಕಾಯುತ್ತ ತಿರುಗುತ್ತಿದ್ದಾಗಲೇ ಜಮೀಲನ ಮನೆಯ ಪಾರಿವಾಳದ ಸಾರು ಅವನ ಪಿತ್ತವನ್ನು ಕೆರಳಿಸಿತ್ತು.

## 4

ಶಬ್ಬೀರ ಅವತ್ತು ಬೇಕಂತಲೇ ಜಮೀಲನಿಗೆ ಕೇಳುವಂತೆ ತನ್ನ ಹೆಣ್ಣು ಪಾರಿವಾಳದ ವರ್ಣನೆ ಮಾಡಿದ್ದ. ಹೊಟ್ಟೆಯಲ್ಲಿ ಮೊಟ್ಟೆಯಿರುವ ಪಾರಿವಾಳದ ಮಾಂಸಕ್ಕೆ ಮಸಾಲೆ ಹಚ್ಚಿ ತಿಂದರೆ